## ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

ಸಾಕ್ಷಿಯ ಹೆಸರು :- ಸಾಕ್ಷಿಜೈನ್

ತಂದೆ/ಗಂಡನ ಹೆಸರು :- ಜಗಮೋಹನ್ ಮೆಹತಾ

ವಯಸ್ಸು :- 26 ವರ್ಷ

ಉದ್ಯೋಗ :- ಗೃಹಿಣಿ

ವಾಸಸ್ಥಳ :- ರಾಜಸ್ತಾನ್

(ಸಾಕ್ಷಿಗೆ ದಿನಾಂಕಃ 13-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-**

ಮೃತ ಅಮಾನ್ ಮೆಹತಾ ನನ್ನ ಸಹೋದರ, ಸದರಿಯವರು ಅಪಘಾತದಿಂದ ಮರಣ ಹೊಂದಿರುತ್ತಾರೆ. ಸದರಿ ಅಪಘಾತ ಹೇಗೆ ಯಾರಿಂದ ಎಲ್ಲಿ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಮತ್ತು ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ.ಸ.ಅ. ರವರು ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸ.ಸ.ಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 15-12-2023 ರಂದು ಬೆಳಗ್ಗೆ 6.00 ಗಂಟೆ ಸಮಯದಲ್ಲಿ ಗೆಜ್ಜಲಗೆರೆ ಕಾಲೋನಿಯ ಬಳಿ ವಿಲಾಸಿನಿ ಲಾಡ್ಜ್ ನೇರದಲ್ಲಿರುವ ರಾಷ್ಟ್ರೀಯ ಹೆದ್ದಾರಿ ರಸ್ತೆ 275 ರಲ್ಲಿ ಬೆಂಗಳೂರು- ಮೈಸೂರು ಕಡೆಗೆ ಹೋಗುವ ರಸ್ತೆಯಲ್ಲಿ ಆರೋಪಿಯು ಕೆಎ-41-ಬಿ-4480 ರ ಟಯೋಟಾ ಇನೋವಾ ಕಾರಿನ ಚಾಲಕನಾಗಿ, ಸದರಿ ಕಾರ್ ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ರಸ್ತೆಯಲ್ಲಿ ಅಡ್ಡದಿಡ್ಡಿಯಾಗಿ ಚಾಲನೆ ಮಾಡಿಕೊಂಡು ಬಂದು, ಅದೇ ರಸ್ತೆಯಲ್ಲಿ ತನ್ನ ಮುಂದೆ ಹೋಗುತ್ತಿದ್ದ ಒಂದು ಲಾರಿಗೆ ಡಿಕ್ಕಿಪಡಿಸಿದ್ದು, ಸದರಿ ಕಾರು ಆರೋಪಿಯ ನಿಯಂತ್ರಣ ತಪ್ಪಿ ರಸ್ತೆಯ ಎಡಭಾಗದಲ್ಲಿರುವ ತಡೆಗೋಡೆಗೆ ಡಿಕ್ಕಿ ಮಾಡಿದ ಪರಿಣಾಮ ಕಾರಿನ ಹಿಂಬದಿ ಕುಳಿತಿದ್ದ ಚಾಸಾ-1 ರಿಂದ 3 ರವರಿಗೆ ಸಾಮಾನ್ಯ ಸ್ವರೂಪದಲ್ಲಿ ಗಾಯವಾಗಿದ್ದು, ಕಾರಿನ ಮುಂಭಾಗ ಕುಳಿತಿದ್ದ ಅಮೆನ್ ಮೆಹತಾ ರವರಿಗೆ ತಲೆ, ಮೂಗಿಗೆ ತೀವ್ರ ಸ್ವರೂಪದ ರಕ್ತಗಾಯವಾಗಿದ್ದು, ನೀವು ಮತ್ತು ಕಾರಿನಲ್ಲಿದ್ದ ಇತರರು ಹಾಗೂ ಸಾರ್ವಜನಿಕರು ಕಾರಿನಲ್ಲಿದ್ದ ಗಾಯಾಳುಗಳು ಹಾಗೂ ಅಮೆನ್ ಮೆಹತಾ ರವರನ್ನು ಎತ್ತಿ ಉಪಚರಿಸಿ ಆಂಬುಲೇನ್ಸ್ ನಲ್ಲಿ ಮಂಡ್ಯದ ಡಿಆರ್ ಎಂ ಆಸ್ಪತ್ರೆಗೆ ದಾಖಲಿಸಿದ್ದು, ಸದರಿಯವರು ಚಾಸಾ-2, 3 ಮತ್ತು ಅಮೆನ್

ಮೆಹತಾ ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರು ಆಸ್ಪತ್ರೆಗೆ ಸೇರಿಸುವಂತೆ ಹೇಳಿದ ಮೇರೆಗೆ ಬೆಂಗಳೂರಿನ ಮಹಾವೀರ ಜೈನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದ್ದು, ಆದರೆ ಅಮೆನ್ ಮೆಹತಾ ರವರು ದಾರಿ ಮಧ್ಯದಲ್ಲಿ ಮೃತಪಟ್ಟಿರುವುದಾಗಿ ವೈದ್ಯರು ಪರೀಕ್ಷಿಸಿ ತಿಳಿಸಿದ್ದರು.

ಅದರಂತೆ ದಿ 16-12-2023 ರಂದು ನೀವು ಠಾಣೆಗೆ ಹಾಜರಾಗಿ ''ದಿ 15-12-2021 ರಂದು..................ಕ್ರಮ ಕೈಗೊಳ್ಳಬೇಕೆಂದು ಕೋರಿಕೆ.'' ಎಂದು ಹೇಳಿಕೆ ನೀಡಿದ್ದೆನೆ ಎಂದರೆ ಸರಿಯಲ್ಲ. ಸದರಿ ನಿರಾಕರಣೆಯ ಭಾಗವನ್ನು ಸಂಪೂರ್ಣವಾಗಿ ಸಾಕ್ಷಿಗೆ ಓದಿ ಹೇಳಿದ್ದು ನಿರಾಕರಿಸಿದ ಮೇರೆಗೆ ಸದರಿ ಹೇಳಿಕೆಯ ಭಾಗವನ್ನು ನಿಪಿ-14 ಎಂದು ಗುರುತಿಸಲಾಯಿತು. ನಿಪಿ-14 ರಲ್ಲಿರುವ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯವಾಗಲಿ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿ ಮುಂದುವರೆದು ನಾವು ರಾಜಿಯಾಗಿದ್ದೇವೆ ಎನ್ನುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಏನು ಇಲ್ಲವೆಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು